ಹುಲಿಗಣತಿ

3135 (3315); ಶ್ರೀ ಜಗದೀಶ್ ಕುಮಾರ್ ಆರ್(ಹೆಬ್ಬಾಳ)

ಅ) ರಾಜ್ಯದಲ್ಲಿ ಹುಲಿ ಗಣತಿ ಮಾಡಿದ ವರ್ಷ ಯಾವುದು(ಮಾಹಿತಿ ಒದಗಿಸುವುದು);

ಆ) ಸದರಿ ಗಣತಿಯನ್ನು ನಡೆಸಲು ಮಾಡಿರುವ ವೆಚ್ಚವೆಷ್ಟು; ಯಾವ ಸಹಯೋಗದೊಂದಿಗೆ ನಡೆಸಲಾಗಿದೆ;

ಇ) ರಾಜ್ಯದಲ್ಲಿರುವ ಪ್ರಸ್ತುತ ಹುಲಿಗಳೆಷ್ಟು; ಅವುಗಳ ಅವನತಿ ತಡೆಯಲು ಸರ್ಕಾರವು ತೆಗೆದುಕೊಂಡ ಕ್ರಮವೇನು;

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹುಲಿ ಗಣತಿ ಕಾರ್ಯವನ್ನು 4 ವರ್ಷಕ್ಕೊಮ್ಮೆ ಕೈಗೊಳ್ಳಲಿದ್ದು, ಅದರಂತೆ, 2013–14ನೇ ಸಾಲಿನಲ್ಲಿ ಅಖಿಲ ಭಾರತ ಹುಲಿ ಗಣತಿ ಕಾರ್ಯವನ್ನು ಮಾಡಲಾಗಿದೆ. ಹುಲಿ ಗಣತಿ ಕಾರ್ಯವನ್ನು ಈ ಕೆಳಕಂಡಂತೆ 4 ಹಂತದಲ್ಲಿ ಕೈಗೊಳ್ಳಲಾಗುವುದು.

Phase-I	Collection ground data using an eight days protocol.
Phase-II	Use of remotely sensed data to generate landscape and related indices.
Phase-III	Use of Camera traps and distance sampling for computing densities of tigers and ungulates.
Phase-IV	Tiger Reserve level monitoring data.

ಆ) ಹುಲಿ ಗಣತಿಯನ್ನು ನಡೆಸಲು ₹ 30.962 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 2014ರಲ್ಲಿ ನಡೆದ ಅಖಿಲ ಭಾರತ ಹುಲಿ ಗಣತಿ ಕಾರ್ಯವನ್ನು ಭಾರತೀಯ ವನ್ಯಜೀವಿ ಸಂಸ್ಥೆ, ಡೆಹರಾಡೂನ್, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿ ಮತ್ತು ಅರಣ್ಯ ಇಲಾಖೆಯ ಸಹಭಾಗಿತ್ವದೊಂದಿಗೆ ಸ್ಥಳೀಯ ಸ್ವಯಂಸೇವಕರನ್ನೊಳಗೊಂಡು ನಡೆಸಲಾಗಿದೆ.

ಇ) 2014ರ ಹುಲಿ ಗಣತಿ ಪ್ರಕಾರ ರಾಜ್ಯದಲ್ಲಿ 406 ಹುಲಿಗಳಿವೆ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ, ನವದೆಹಲಿರವರ ಮತ್ತು ವನ್ಯಜೀವಿ (ಸಂರಕ್ಷಣಾ) ಕಾಯ್ದೆ, 1972 ರನ್ವಯ ಹುಲಿಗಳ ರಕ್ಷಣಾ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

ವನ್ಯ ಮೃಗಗಳ ದಾಳಿ

3136 (3316); ಶ್ರೀ ಜಗದೀಶ್ ಕುಮಾರ್ ಆರ್(ಹೆಬ್ಬಾಳ)

ಅ) ರಾಜ್ಯದಾದ್ಯಂತ ಕಳೆದ ಮೂರು ವರ್ಷಗಳಲ್ಲಿ ವನ್ಯ ಮೃಗಗಳ ದಾಳಿಗೆ ನಾಗರೀಕರುಗಳು ತುತ್ತಾಗಿ ಮರಣ ಹಾಗೂ ಗಾಯಗೊಂಡ ಪ್ರಕರಣಗಳೆಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಸದರಿ ದಾಳಿಯಲ್ಲಿ ತುತ್ತಾಗಿರುವವರಿಗೆ ಸರ್ಕಾರವು ಘೋಷಿಸಿರುವ ಪರಿಹಾರಗಳೆಷ್ಟು (ಪ್ರಕರಣವಾರು ವಿವರ ನೀಡುವುದು);

ಇ) ಸರ್ಕಾರವು ಘೋಷಿಸಿರುವ ಪರಿಹಾರವನ್ನು ನೀಡಲಾಗಿದೆಯೇ; ಇಲ್ಲದಿದ್ದಲ್ಲಿ ಕಾರಣ ನೀಡುವುದು (ಪ್ರಕರಣವಾರು ವಿವರ ನೀಡುವುದು);

ಈ) ವನ್ಯ ಮೃಗಗಳಿಂದಾಗುತ್ತಿರುವ ನಿರಂತರ ದಾಳಿಯನ್ನು ತಡೆಗಟ್ಟಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಮತ್ತು ಆ) ಕಳೆದ ಮೂರು ವರ್ಷಗಳಲ್ಲಿ ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗಿರುವ ಮಾನವ ಪ್ರಾಣ ಹಾನಿ ಮತ್ತು ಗಾಯಗೊಂಡ ಪ್ರಕರಣಗಳ ವಿವರ ಹಾಗೂ ದಯಾತ್ಮಕ ಧನವನ್ನು ಪಾವತಿಸಿರುವ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಹೌದು, ನಿಯಮಾನುಸಾರ ದಯಾತ್ಮಕ ಧನವನ್ನು ಪಾವತಿಸಲಾಗಿರುತ್ತದೆ.